ಆಂದೋಲನ

# ‘ಗ್ರಾಮೀಣ ಮಹಿಳೆಯರನ್ನೂ ಸ್ವಾವಲಂಬಿಗಳನ್ನಾಗಿಸಿ’

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಡಾ.ಪೂರ್ಣಿಮಾ ಕೆ.ಮೂರ್ತಿ ಅಭಿಮತ



ಮೈಸೂರು: ಗ್ರಾಮೀಣ ಪ್ರದೇಶದ ಮಹಿಳೆಯರ ಪರಿಸ್ಥಿತಿ ಇಂದಿಗೂ ಸ್ವಲ್ಪ ಭಿನ್ನವಿದ್ದು, ಅಂತಹ ಮಹಿಳೆಯರನ್ನೂ ಸ್ವಾವಲಂಬಿಗಳನ್ನಾಗಿಸಲು ದಿಟ್ಟ ಹೆಜ್ಜೆ ಇಡಬೇಕು ಎಂದು ಮೈಸೂರಿನ ಪ್ರಜ್ಞಾ ಕುಟೀರದ ನಿರ್ದೇಶಕರಾದ ಡಾ.ಪೂರ್ಣಿಮಾ ಕೆ. ಮೂರ್ತಿ ತಿಳಿಸಿದರು.

ನಗರದ ಮೈಸೂರು–ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಹಿಳಾ ಘಟಕ ಮತ್ತು ಆಂತರಿಕ ದೂರು ಸ್ವೀಕಾರ ಸಮಿತಿಯ ಸಂಯುಕ್ತಾಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಇಂದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪುರುಷರಿಗೆ ಸಮನಾಗಿ ಸಾಧನೆಯ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾಳೆ. ಎಷ್ಟೇ ಸವಾಲುಗಳು ಎದುರಾದರೂ ಭಾರತೀಯ ವೀರ ವನಿತೆಯರನ್ನು ಮಾದರಿಯನ್ನಾಗಿ ತೆಗೆದುಕೊಂಡು ತನ್ನ ಗುರಿ ತಲುಪಬೇಕಿದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿವಿಯ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಜ್ಯೋತಿ ಶಂಕರ್ ಮಾತನಾಡಿ, ಮಹಿಳೆಯರಿಗೆ ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಿದ್ದು, ಅನೇಕ ಅಡ-ತಡೆಗಳನ್ನು ದಾಟಿ, ಸವಾಲುಗಳನ್ನು ಮೆಟ್ಟಿನಿಂತು ಸಾಧನೆಯತ್ತ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ಮಹಿಳೆಯರ ಮೇಲೆ ಅನುಕಂಪವನ್ನಷ್ಟೇ ತೋರಿದರೆ ಸಾಲದು, ಮಾನಸಿಕವಾಗಿ ಸದೃಢಳನ್ನಾಗಿ ಮಾಡಿ ಆಂತರಿಕವಾಗಿ ಮತ್ತು ಬಾಹ್ಯವಾಗಿ ಅವಳನ್ನು ನೋಡುವ ದೃಷ್ಟಿಕೋನವೂ ಬದಲಾಗಬೇಕಿದೆ ಎಂದರು.

ಮಹಿಳಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿನಿಯರಿಗೆ ಮತ್ತು ಮಹಿಳಾ ಅಧ್ಯಾಪಕರಿಗೆ ಹಮ್ಮಿಕೊಳ್ಳಲಾಗಿದ್ದ ವಿವಿಧ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾಲೇಜಿನ ಐಕ್ಯುಎಸಿ ನಿರ್ದೇಶಕ ಡಾ.ಎಲ್.ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಘಟಕದ ಅಧ್ಯಕ್ಷರಾದ ಡಾ.ಎಸ್.ಆರ್.ಭಾಗ್ಯಶ್ರೀ, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಡೀನ್‌ಗಳಾದ ಡಾ. ಎಂ.ಎಸ್.ಗೋವಿಂದೇಗೌಡ, ಡಾ.ಕೆ.ಶ್ರೀನಿವಾಸ ಇತರರು ಹಾಜರಿದ್ದರು.

Main Edition
Mar 14, 2024 Page No. 6
Powered by : eReleGo.com